# ಕರ್ನಾಟಕ ಸರ್ಕಾರ

**ಆಯುಕ್ತರಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು:560001**

**ಸಂಖ್ಯೆ: ಸಹನಿಶಾಶಿ.ಆಶಾ/ಕ.ವ.ಕು.ಜಾ.ಸು/32544/ಇ.ವಿ.2020** **ದಿನಾಂಕ: 30-3-2020**

**ಸುತ್ತೋಲೆ**

ವಿಷಯ: ಖಾಸಗಿ ಶಾಲೆಗಳಲ್ಲಿ 2020-21ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಕ್ಕಳ ದಾಖಲಾತಿಗೆ ಶುಲ್ಕ ಪಡೆಯುವ ಬಗ್ಗೆ.

ಉಲ್ಲೇಖ: (1) ಈಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ:9-3-2020, ದಿ: 12-3-2020, ದಿ: 13-3-2020, ದಿ: 14-3-2020, ದಿ: 22-3-2020, 24-3-2020

(2) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಕುಕ/54/ಸಿಜಿಎಂ/2020 ದಿ: 23-3-2020

(3) ಸಾಂಕ್ರಾಮಿಕ ರೋಗಗಳ ಅಧಿನಿಯಮ 1897 ಸೆಕ್ಷನ್ - 3

******

ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳು 2020-21ನೇ ಸಾಲಿನ ಮಕ್ಕಳ ದಾಖಲಾತಿಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ಮುಂದೂಡುವಂತೆ ಈಗಾಗಲೇ ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 24-3-2020ರಲ್ಲಿ ಸೂಚಿಸಲಾಗಿತ್ತು, ಹಾಗೂ ಯಾವುದೇ ಶಾಲಾ ಆಡಳಿತ ಮಂಡಳಿಗಳು ಮೇಲ್ಕಂಡ ಸೂಚನೆಗಳನ್ನು ಪಾಲಿಸದೇ ಇರುವುದು/ಉಲ್ಲಂಘಿಸಿರುವುದು ಕಂಡು ಬಂದಲ್ಲಿ ಉಲ್ಲೇಖ (2)ರ ಸರ್ಕಾರದ ಆದೇಶದ ಕಂಡಿಕೆ (7) ಮತ್ತು ಸಾಂಕ್ರಾಮಿಕ ರೋಗಗಳ ಅಧಿನಿಯಮ 1897ರ ಸೆಕ್ಷನ್ (3) ರಂತೆ ಪ್ರಕರಣ ದಾಖಲಿಸಿ ಕಾನೂನು ರೀತ್ಯಾಕ್ರಮ ಕೈಗೊಳ್ಳಲಾಗುವುದು ಎಂದು ಸಹ ಸದರಿ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು.

ಆದರೂ, ಕೆಲವು ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳು 2019-20ನೇ ಸಾಲಿನಲ್ಲಿ ಅದೇ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ತೇರ್ಗಡೆಗೊಂಡು 2020-21ನೇ ಸಾಲಿಗೆ ಅದೇ ಶಾಲೆಯ ಮುಂದಿನ ತರಗತಿಗೆ ದಾಖಲಾಗುವ ವಿದ್ಯಾರ್ಥಿಗಳ ಶುಲ್ಕವನ್ನು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಪಾವತಿಸಲು ಕೊನೆಯ ದಿನಾಂಕವನ್ನು ನಿಗಧಿಪಡಿಸಿ ಪೋಷಕರಿಗೆ ಪತ್ರ ಮುಖೇನ, ಇಮೇಲ್ ಮತ್ತು ಎಸ್.ಎಂ.ಎಸ್. ಮೂಲಕ ರವಾನಿಸಿ ಶುಲ್ಕ ಪಾವತಿಸುವಂತೆ ಒತ್ತಡ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಪ್ರಸ್ತುತ ರಾಜ್ಯದ ಸದ್ಯದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಖಾಸಗಿ ಶಾಲೆಗಳಲ್ಲಿ 2019-20ನೇ ಸಾಲಿನಲ್ಲಿ ವ್ಯಾಸಂಗ ಮಾಡಿ ತೇರ್ಗಡೆಗೊಂಡು ಅದೇ ಶಾಲೆಯಲ್ಲಿ ಮುಂದಿನ ತರಗತಿಗೆ ದಾಖಲಾಗುವ ವಿದ್ಯಾರ್ಥಿಗಳ 2020-21ನೇ ಸಾಲಿನ ಶುಲ್ಕವನ್ನು ಪಡೆಯುವುದನ್ನು ಹಾಗೂ 2020-21ನೇ ಸಾಲಿನ ದಾಖಲಾತಿ ಪ್ರಕ್ರಿಯೆ ಮತ್ತು ಶುಲ್ಕ ವಸೂಲಾತಿ ಮಾಡುವುದನ್ನು ಸರ್ಕಾರದ ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ ಎಂಬುದನ್ನು ಶಾಲಾ ಆಡಳಿತ ಮಂಡಳಿಗಳಿಗೆ ಸೂಚಿಸಿದೆ. ಹಾಗೂ ಈ ಬಗ್ಗೆ ಪೋಷಕರ ಮೇಲೆ ಯಾವುದೇ ಒತ್ತಡ ಹೇರುವಂತಿಲ್ಲವೆಂದು ಮತ್ತೊಮ್ಮೆ ಸ್ಪಷ್ಟೀಕರಿಸಿದೆ. ಈಗಾಗಲೇ ಯಾವುದಾದರೂ ಶಾಲೆಗಳ ಆಡಳಿತ ಮಂಡಳಿಗಳು 2020-21ನೇ ಸಾಲಿನ ಶುಲ್ಕವನ್ನು ಪಾವತಿ ಮಾಡಲು ಪೋಷಕರಿಗೆ ಸೂಚನೆ ನೀಡಿದ್ದಲ್ಲಿ ಸದರಿ ಸೂಚನೆಗಳನ್ನು ತಕ್ಷಣವೇ ಹಿಂಪಡೆಯತಕ್ಕದ್ದು, ಅಥವಾ ಮುಂದಿನ ಆದೇಶದವರೆಗೆ ಮುಂದೂಡತಕ್ಕದ್ದು.

ಒಂದು ವೇಳೆ ಸರ್ಕಾರದ ಆದೇಶವನ್ನು ಉಲ್ಲಂಘಿಸಿದಲ್ಲಿ ಅಂತಹ ಶಾಲಾ ಆಡಳಿತ ಮಂಡಳಿಯ ವಿರುದ್ಧ ಸಾಂಕ್ರಾಮಿಕ ರೋಗಗಳ ಅಧಿನಿಯಮ 1897ರ ಸೆಕ್ಷನ್ (3), ವಿಕೋಪ ನಿರ್ವಹಣಾ ಅಧಿನಿಯಮ, ಭಾರತೀಯ ದಂಡ ಸಂಹಿತೆ 188ನೇ ಪ್ರಕರಣದ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಹಾಗೂ ಶಿಕ್ಷಣ ಕಾಯ್ದೆಯ ಅಡಿಯಲ್ಲಿ ಸಂಬಂಧಪಟ್ಟ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು.

ಸರ್ಕಾರದ ಆದೇಶವನ್ನು ಉಲ್ಲಂಘಿಸಿದ ಪ್ರಕರಣಗಳು ವರದಿಯಾದಲ್ಲಿ ಕೂಡಲೇ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಅಂತಹ ಶಾಲೆಗಳ ವಿರುದ್ಧ ಕೂಡಲೇ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿ ಮಾಧ್ಯಮಗಳಲ್ಲಿ ಪ್ರಚುರಪಡಿಸುವುದು.

ಈ ಸುತ್ತೋಲೆಯನ್ನು ಇಮೇಲ್ / ವಾಟ್ಸ್‌ಪ್ ಹಾಗೂ ಇತರೇ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಎಲ್ಲಾ ಶಾಲೆಗಳ ಆಡಳಿತ ಮಂಡಳಿಗಳಿಗೆ/ಶಾಲಾ ಮುಖ್ಯ ಶಿಕ್ಷಕರಿಗೆ ತಲುಪಿಸಲು ಅಗತ್ಯಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಪೋಷಕರಿಗೆ/ವಿದ್ಯಾರ್ಥಿಗಳಿಗೆ ಸ್ಥಳೀಯ ಮಾಧ್ಯಮಗಳ ಮೂಲಕ ಪ್ರಚುರ ಪಡಿಸಲು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಚಿಸಿದೆ.

30/8/20

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಅಗತ್ಯಕ್ರಮಕ್ಕಾಗಿ (ಜಿಲ್ಲಾ ಉಪನಿರ್ದೇಶಕರ ಮುಖಾಂತರ)
3. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳ ಮುಖ್ಯೋಪಾಧ್ಯಾಯರಿಗೆ ಸೂಕ್ತ ಕ್ರಮಕ್ಕಾಗಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

**ಪ್ರತಿಯನ್ನು**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ, ಸನ್ಮಾನ್ಯ ಸಚಿವರ ಗಮನಕ್ಕೆ ತರಲುಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ರವರ ಮಾಹಿತಿಗಾಗಿ.

## Government of Karnataka

## Office of the Commissioner for Public Instruction, Nrupathunga Road, Bangalore:560001

No. JD.Scl.edn.PS/Co.vi.cir/32544/E.V.2020 Date: 30-3-2020

### CIRCULAR

Sub: Regarding the collection of admission fee from students for the academic year 2020-21 by the private institutions.

Ref: 1) This office circular even number dated 09.03.202, 12.03.2020, 13.03.2020, 14.03.2020, 22.03.2020 & 24.03.2020

2) Government of Karnataka Order No.ಆಕುಕ/55/ಸಿಜಿಎಂ/2020 dated 23.03.2020

3) Section-03 of Epidemic Disease Act, 1897.

***

Government/Aided/Unaided institutions were instructed to postpone the admission process of students for the academic year 2020-21 untill further orders through this office circular even number dated 24.03.2020. Further, it was mentioned that case will be registered as per the provisions of Para 7 of Government order under reference-2 and Section (3) of Epidemic Disease Act, 1897, against any such school management who fail to abide by the instructions/violate them.

However, it has come to the notice of the government that some private institutions are sending letters, Emails and SMS to parents insisting payment ~~for~~ in the month of April and May within the stipulated deadline for those students studying in the same institution during 2019-20 and have been promoted to the next class for the year 2020-21.

Considering the current situation of the state(COVID-19), the private institutions are instructed to postpone the process of fee collection from the students studying in the same institution during 2019-20 and promoted to next class, as well as admission

process and fee collection for the year 2020-21 until further orders. It is once again clarified that the pressure should not be mounted on parents in this regard. If any school management has issued such notice to the parents, it is instructed to withdraw such notice or postpone the same untill further orders.

In case of violation of government order, criminal case will be filed against the school management as per the provision of section (3) of Epidemic Disease Act 1897, Disaster Management Act, Section 188 of the IPC and stringent action will be initiated for the withdrawal of recognition of the concerned school as per the provision of Karnataka Education Act.

The concerned DDPI(Amin) shall file a criminal case immediately after receiving a report against any school violating the government order and the same shall be made public through media.

All DDPIs(Admin), Department of Public instruction are instructed to publish this circular through email/whatsapp and other electronic media to reach all the school managements /school Head masters for taking necessary action and to all parents/students through local media.

Commissioner
Department of Public Instruction

To

1. All District DDPIs (Admin), Department of Public Instruction for necessary action
2. All Block Education officers of all taluks for necessary action(through DDPIs)
3. All School managements/Head masters of all the schools (through BEOs)